**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಅಸಲು ದಾವಾ ಸಂಖ್ಯೆ :: 1/2021**

**ಸಾಕ್ಷಿದಾರರ ಹೆಸರು** : ಶ್ರೀನಿವಾಸ ಡಿ ಎಸ್ **PW-02**

**ತಂದೆಯ ಹೆಸರು** : ಸುಬ್ಬಣ್ಣ ಗೌಡ

**ವಯಸ್ಸು** : 70

**ಉದ್ಯೋಗ** : ಕೃಷಿಕ

**ವಾಸಸ್ಥಳ** : ದಂಡಿನ ಬೆಟ್ಟ.

**ದಿನಾಂಕಃ19-12-2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ವಾದಿ ಪರ ಶ್ರೀ. V.R.N ವಕೀಲರಿಂದ ::**

ವಾದಿ ನನಗೆ ಗೊತ್ತು. ಅವರು ನಮ್ಮ ಗ್ರಾಮದವರು. ವಾದಿಯು ಅಡ್ಡಗದ್ದೆ ಗ್ರಾಮ ಪಂಚಾಯಿತಿಯ ಕೆಳಕೊಪ್ಪ ಗ್ರಾಮದ ಸ.ನಂ.150 ರಲ್ಲಿ ಸೊಪ್ಪಿನ ಬೆಟ್ಟದಲ್ಲಿ ಮನೆ ಮಾಡಿಕೊಂಡು ಇರುತ್ತಾರೆ. ಸದರಿ ವಾದಿಯು ಸದರಿ ಸ್ಥಳದಲ್ಲಿ ಸುಮಾರು 15 ವರ್ಷದಿಂದ ವಾಸವಾಗಿರುತ್ತಾರೆ. ಸದರಿ ಮನೆಯ ವಿಸ್ತೀರ್ಣ ಪೂರ್ವ-ಪಶ್ಚಿಮ 26 ಅಡಿ ಅಗಲ ಮತ್ತು ಉದ್ದ ಸುಮಾರು 48 ರಿಂದ 50 ಅಡಿ ಇರುತ್ತದೆ. ಪ್ರತಿವಾದಿಯರು ವಾದಿಯ ಸ್ವಾಧೀನಕ್ಕೆ ಅಡ್ಡಿ ಪಡಿಸಿರುತ್ತಾರೆ. 2021 ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಯವರು ವಾದಿಯ ಮನೆಗೆ ತೊಂದರೆ ನೀಡಿರುತ್ತಾರೆ. ಪಂಚಾಯಿತಿಯವರು ವಾದಿಯ ಮನೆಯನ್ನು ಕೆಡವುತ್ತೇವೆ ಎಂದು ಬಂದಿರುತ್ತಾರೆ. ಸಾಕ್ಷಿಯು 4 ಪೋಟೋಗಳಲ್ಲಿ ವಾದಿಯ ಮನೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ಈಗಾಗಲೇ ನಿಪಿ-13 ರಿಂದ ನಿಪಿ-16 ಎಂದು ಗುರುತಿಸಲಾಗಿರುತ್ತದೆ. ಸದರಿ ಮನೆಯಲ್ಲಿ ವಾದಿ, ವಾದಿಯ ಪತ್ನಿ ಮತ್ತು ವಾದಿಯ ಮಕ್ಕಳು ವಾಸವಾಗಿರುತ್ತಾರೆ. ಪ್ರತಿವಾದಿಯವರಿಗೆ ಬಲತ್ಕಾರವಾಗಿ ವಾದಿಯ ಮನೆಯನ್ನು ಕೀಳಲು ಯಾವುದೇ ಅಧಿಕಾರ ಇರುವುದಿಲ್ಲ. ಈ ವರೆಗೆ ವಾದಿಯು ಮನೆಯ ಸ್ವಾಧೀನವನ್ನು ಹೊಂದಿರುತ್ತಾರೆ.

**:: ಪಾಟೀ ಸವಾಲು :: ವಾದಿ ಪರ ಶ್ರೀ. ಹೆಚ್. ಆರ್. ಯು ವಕೀಲರಿಂದ ::**

**(ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ/-

ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಃ

ಶೃಂಗೇರಿ.